**ಶ್ರೀ ಜಗದ್ಗುರು ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್**
ನಂ.11, ಮೊದಲ ಮಹಡಿ, ಲಿಂಕ್ ರಸ್ತೆ, ಬ್ರಿಗೇಡ್ ಸ್ಪಾರ್ಕಲ್ ಎದುರು, ಜೆ ಪಿ ನಗರ, ಮೈಸೂರು–570008
**Website–www.jhcs.org.in/ e–mail–jhcs.mys@gmail.com**
ಆದೇಶ ಸಂಖ್ಯೆ, ಜೆ ಆರ್ ಎಂ / ಆಡಳಿತ / ಬಿ/ ಹೆಚ್ ಹೆಚ್ ಎಸ್/ ಸಿ ಆರ್–08
ನೋಂದಣಿ ಸಂಖ್ಯೆ 49223/ 2022–23 ದಿನಾಂಕ:26–07–2023
ದೂರವಾಣಿಸಂಖ್ಯೆ: **0821–3565157/+91–9686707679**
**ಕಛೇರಿಯ ಸಮಯ:** ಬೆಳಿಗ್ಗೆ **10:00** ರಿಂದ **ಸಂಜೆ 5:30ರ ವರೆಗೆ**

NO, JHCS- 12/2026-27 **ಸುತ್ತೋಲೆ-20** **ದಿನಾಂಕ:12.08.2026**

ಪ್ರೀತಿಯ ಸದಸ್ಯ ಬಾಂಧವರಿಗೆ ನಮ್ಮ ಹೃತ್ಪೂರ್ವಕ ನಮಸ್ಕಾರಗಳು.
ತಮಗೆ ಈಗಾಗಲೇ ವೇದ್ಯವಾಗಿರುವಂತೆ ಈ ಗೃಹನಿರ್ಮಾಣ ಸಂಘ ಅತ್ಯಂತ ಪಾರದರ್ಶಕವಾಗಿ ಪ್ರಜಾಸತ್ತಾತ್ಮಕ ಮೌಲ್ಯಗಳ ಸುಭದ್ರ ತಳಪಾಯದ ಮೇಲೆ ನಿರ್ಮಿತವಾಗಿದೆ. ಇದಕ್ಕೆ ಪರಮಪೂಜ್ಯ ಸುತ್ತೂರು ಶ್ರೀಗಳ ಆಶೀರ್ವಾದ ಹಾಗೂ ತಮ್ಮೆಲ್ಲರ ಅಪರಿಮಿತ ಬೆಂಬಲ ಕಾರಣ. ನಮ್ಮನಿಮ್ಮೆಲ್ಲರ ಈ ಸಂಘ ಬೇರೆ ಸಂಸ್ಥೆಗಳಿಗಿಂತ ವಿಭಿನ್ನ ಹಾಗೂ ವಿಶಿಷ್ಟವಾಗಿರುವುದು ಪಾರದರ್ಶಕತೆ ಹಾಗೂ ಪ್ರಾಮಾಣಿಕತೆಗಳನ್ನು ಸದಾ ಅಳವಡಿಸಿಕೊಂಡಿರುವುದರಿಂದ ಎಂಬುದು ತಮಗೆ ತಿಳಿದಿರುವ ಸಂಗತಿ. ಅದರಿಂದಲೇ ಪ್ರಾರಂಭದಿಂದ ಈ ತನಕದ ಸಂಘದ ಪಯಣದ ಸಾಧನೆಗಳು ಹಾಗೂ ಎದುರಿಸಿದ ಅಡ್ಡಿ ಆತಂಕಗಳನ್ನು ತಮ್ಮೊಡನೆ ವಿನಮ್ರವಾಗಿ ಈ ಸುತ್ತೋಲೆಯಲ್ಲಿ ಹಂಚಿಕೊಳ್ಳುತ್ತಿದ್ದೇವೆ.

ಗೃಹನಿರ್ಮಾಣ ಸಹಕಾರ ಸಂಘಗಳ ಕ್ಷೇತ್ರದಲ್ಲಿ ಅಪಾರ ಪರಿಣತಿ ಹೊಂದಿರುವ ಶ್ರೀ ಎಸ್. ಪುಟ್ಟರಾಜಪ್ಪನವರ ನೇತೃತ್ವದಲ್ಲಿ ಸಮಾನಮನಸ್ಕ ಪ್ರವರ್ತಕರ ಒಂಬತ್ತು ಜನರ ತಂಡ ಈ ಸಂಸ್ಥೆಯನ್ನು ಸ್ಥಾಪಿಸಿತು. ಪ್ರಾರಂಭದಲ್ಲಿ ಮೈಸೂರು– ಬನ್ನೂರು ರಸ್ತೆಯಲ್ಲಿರುವ ನೂರಕ್ಕೂ ಅಧಿಕ ಎಕರೆ ಭೂಮಿಯ ಮಾಲೀಕತ್ವವನ್ನು ಹೊಂದಿದ್ದ ಶ್ರೀ ಚೇತನ್ ಪಿ ತಯಾಳ್ ಹಾಗೂ ಶ್ರೀಕಾಂತ್ ಅವರು ನಮ್ಮ ಸಂಘಕ್ಕೆ ಭೂಮಿಯನ್ನು ನೀಡಲು ವಾಸ್ತವ ಟೌನ್ಶಿಪ್ ಸಂಸ್ಥೆಯ ನಿರ್ದೇಶಕರಾದ ಶ್ರೀ ಎಂ.ಎಸ್. ಕುಮಾರಸ್ವಾಮಿ ಅವರ ಮೂಲಕ ಮುಂದೆ ಬಂದರು. ತತ್ಪರಿಣಾಮವಾಗಿ ,'ಶ್ರೀ ಜಗದ್ಗುರು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್' ಶಿರೋನಾಮೆಯಡಿ ಸಂಘ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿತು.

ದಿನಾಂಕ 02–09–2022 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಶ್ರೀ ಚೇತನ್ ಪಿ ತಯಾಳ್ ಹಾಗೂ ಶ್ರೀ ಶ್ರೀಕಾಂತ್ ರವರ ಒಡೆತನದಲ್ಲಿದ್ದ ಸುಮಾರು 248 ಎಕರೆ ಭೂಮಿಯನ್ನು ಶ್ರೀ ಎಮ್.ಎಸ್ ಕುಮಾರಸ್ವಾಮಿಯವರ ಮೂಲಕ ಸಂಘದ ಹೆಸರಿಗೆ ಅಗ್ರಿಮೆಂಟ್ ಮಾಡಿಸಲು ನಿರ್ಧರಿಸಲಾಯಿತು. ಮುಂದುವರಿದು ದಿನಾಂಕ 26–06–2022 ರಂದು ಪರಮಪೂಜ್ಯರ ಅಮೃತ ಹಸ್ತದಿಂದ ಕಚೇರಿ ಉದ್ಘಾಟನೆಗೊಂಡು ದಿನಾಂಕ 27–3–2023 ರಂದು ಬಡಾಣೆಯ ಭೂಮಿ ಪೂಜೆಯ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

ಸಂಘದ ಆಡಳಿತ ಮಂಡಳಿ ಕಾಲಕಾಲಕ್ಕೆ ಸಭೆ ಸೇರಿ ಕರ್ತವ್ಯಗಳನ್ನು ಯಶಸ್ವಿಯಾಗಿ ಮುನ್ನಡೆಸಲು ಬೇಕಾದ ಕಾರ್ಯ ಯೋಜನೆಗಳನ್ನು ರೂಪಿಸಿ ಬಡಾವಣೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಅಳತೆಯ ಅರ್ಹ ನಿವೇಶನಗಳಿಗೆ ದರ ಕಂತುಗಳನ್ನು ನಿಗಧಿ ಪಡಿಸಿ ಸುತ್ತೋಲೆಗಳ ಮೂಲಕ ಸಂಘದ ಸದಸ್ಯರುಗಳಿಗೆ ಮನವಿ ಪತ್ರಗಳನ್ನು ನೀಡಿರುವುದು ತಮ್ಮೆಲ್ಲರಿಗೂ ತಿಳಿದ ಸಂಗತಿಯಾಗಿದೆ.

ನಮ್ಮ ಆಡಳಿತ ಮಂಡಳಿಯ ಮೇಲೆ ನಂಬಿಕೆ ಮತ್ತು ಭರವಸೆಯನ್ನು ಇಟ್ಟ ಸುಮಾರು 3000 ಕ್ಕೂ ಹೆಚ್ಚು ನಾಗರಿಕರು ಸಂಘದ ಸದಸ್ಯತ್ವವನ್ನು ಪಡೆದು ಕೊಂಡಿರುತ್ತಾರೆ. ಪೂರ್ವ ನಿರ್ಧಾರದಂತೆ ಬನ್ನೂರು– ಮೈಸೂರು ರಸ್ತೆಯ ಜಮೀನಿನಲ್ಲಿ ಬಡಾವಣೆ ಅಭಿವೃದ್ಧಿ ಪಡಿಸಲು ಮೊದಲ ಹಂತದಲ್ಲಿ ಹಣ ಪಾವತಿಸಿರುವ ನಿವೇಶನದಾರರಿಗೆ ಚದರ ಅಡಿಗೆ 849/– ರೂ.ಗಳಂತೆ ಹಾಗೂ 2ನೇ ಹಂತದಲ್ಲಿ ನಿವೇಶನ ಠೇವಣಿ ಪಾವತಿಸಿರುವವರಿಗೆ ರೂ. 949/– ರೂ ಗಳಂತೆ ದರ ಹಾಗೂ ಕಂತುಗಳನ್ನು ನಿಗಧಿ ಪಡಿಸಿ ಸುತ್ತೋಲೆಗಳನ್ನು

ಹೊರಡಿಸಲಾಗಿತ್ತು. 850 ಕ್ಕೂ ಹೆಚ್ಚು ನಿವೇಶನಾಕಾಂಕ್ಷಿಗಳು ನಿವೇಶನ ಠೇವಣಿಯನ್ನು ಕಾಲಕಾಲಕ್ಕೆ ಪಾವತಿಸುವ ಮೂಲಕ ಸಂಘದ ಅಭಿವೃದ್ಧಿ ಕಾರ್ಯಗಳು ಯಶಸ್ವಿಯಾಗಿ ಸಾಗಲು ಸಹಕರಿಸಿರುವುದು ನಿಜಕ್ಕೂ ಹೆಮ್ಮೆಯ ಸಂಗತಿಯಾಗಿದೆ.

ಈ ಮೇಲ್ಕಂಡ ಪ್ರಕ್ರಿಯೆಗಳನ್ನು ಮುಗಿಸಿ ಬಡಾವಣೆ ಅಭಿವೃದ್ಧಿ ಪಡಿಸಲು ಕಾರ್ಯೋನ್ಮುಖವಾಗುವ ವೇಳೆ ನಮ್ಮ ಸಂಘಕ್ಕೆ ಜಮೀನು ನೀಡಲು ಒಪ್ಪಂದ ಮಾಡಿಕೊಂಡಿದ್ದ ಮಾಲೀಕರುಗಳ ನಡುವಿನ ಮನಸ್ತಾಪದ ಕಾರಣಕ್ಕಾಗಿ ಕೆಲವು ತಾಂತ್ರಿಕ ಸಮಸ್ಯೆಗಳು ತಲೆದೋರಿದ ಪರಿಣಾಮ ಉದ್ದೇಶಿತ ಪ್ರದೇಶದಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗದಿರುವ ಬಗ್ಗೆ ಆಡಳಿತ ಮಂಡಳಿಯು ಕಾಲ ಕಾಲಕ್ಕೆ ಸುತ್ತೋಲೆ ಮೂಲಕ ಸದಸ್ಯರುಗಳ ಗಮನಕ್ಕೆ ತಂದು ಹಾಗೂ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಎಲ್ಲಾ ಮಾಹಿತಿ ವಿವರಗಳನ್ನು ತಮ್ಮ ಅವಗಾಹನೆಯ ಕೃಪೆಗಾಗಿ ಮಂಡಿಸಿತ್ತು.

ಈ ನಡುವೆ ನಾವು ಎದೆಗುಂದಲಿಲ್ಲ, ನಿವೇಶನ ಅಭಿವೃದ್ದಿದಾರರಾದ ಶ್ರೀ ಎಂ.ಎಸ್ ಕುಮಾರಸ್ವಾಮಿಯವರ ಹಾಗೂ ಸಂಘದ ಪಧಾದಿಕಾರಿಗಳ ಸಂಘಟಿತ ಪ್ರಯತ್ನದ ಫಲವಾಗಿ ತಳೂರು-ದೊಡ್ಡಕಾಟೂರು-ಮುರುಡಗಳ್ಳಿ ಗ್ರಾಮಗಳಿಗೆ ಸೇರಿದ ಎಲ್ಲೆಯಲ್ಲಿ 50 ಎಕರೆ ಭೂ ಪ್ರದೇಶವು ಬಡಾವಣೆ ನಿರ್ಮಿಸಲು ಸೂಕ್ತವೆಂದು ಮನವರಿಕೆಯಾದ್ದದರಿಂದ ದಿನಾಂಕ 06-04-2024 ರಂದು ನಡೆದ ಮಾಸಿಕ ಸಭೆಯಲ್ಲಿ ಕಾರ್ಯ ಯೋಜನೆಯನ್ನು ಅಂಗೀಕರಿಸಲಾಯಿತು.

ಸದಸ್ಯರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ದರವನ್ನು ಕಡಿತಗೊಳಿಸಿ ನಿವೇಶನಕ್ಕೆ ಠೇವಣಿ ಪಾವತಿಸಿದ್ದ ಎಲ್ಲಾ ನಿವೇಶನಾಕಾಂಕ್ಷಿಗಳಿಗೂ ಅನ್ವಯವಾಗುವಂತೆ ಚದರ ಅಡಿಗೆ ರೂ. 799/- ರಂತೆ ದರ ನಿಗಧಿ ಪಡಿಸಲಾಯಿತು. ಹಾಗೂ ಆದಷ್ಟು ಸಂಘದ ಸದಸ್ಯರೆಲ್ಲರಿಗೂ ನಿವೇಶನ ನೀಡಬೇಕೆಂಬ ಸದುದ್ದೇಶದಿಂದ ಬಡಾವಣೆಯಲ್ಲಿ ಲಭ್ಯವಾಗುವ ಮೂಲೆ ನಿವೇಶನ ಹಾಗೂ ವಾಣಿಜ್ಯ ಉದ್ದೇಶಿತ ನಿವೇಶನಗಳನ್ನು ಹರಾಜು ಪ್ರಕ್ರಿಯೆ ಮೂಲಕ ಮಾರಾಟ ಮಾಡದೆ ಒಂದು ನಿಗದಿತ ದರ ನಿಗದಿ ಪಡಿಸಿ (ಹೆಚ್ಚುವರಿಯಾಗಿ ಅಂದರೆ 10% on Total cost of the middle site) ಸಹಕಾರ ಇಲಾಖೆಯ ನಿಯಮಾವಳಿಗಳಂತೆ ಲಾಟರಿ ಮೂಲಕ ವಿತರಿಸಲು ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಣಯಿಸಲಾಯಿತು.ಅದರಂತೆ ಬಡಾವಣೆಯ ಅಭಿವೃದ್ಧಿ ಕಾರ್ಯಗಳು ಕ್ಷಿಪ್ರಗತಿಯಲ್ಲಿ ಸಾಗಿ ಅಂತಿಮ ಹಂತಕ್ಕೆ ತಲುಪಿದ್ದು ಸಂಘದ ಸದಸ್ಯರಿಗೆ ಬಡಾವಣೆಯ ಅಭಿವೃದ್ದಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಸಂಘವು ಅಭಿವೃದ್ಧಿ ಪಡಿಸಿರುವ ಅಧಿಕೃತ ವೆಬ್ ಸೈಟ್ ನಲ್ಲಿ ಕಾಲಕಾಲಕ್ಕೆ ಅನಾವರಣ ಮಾಡಿ ಸದಸ್ಯರು ಪರಿಶೀಲಿಸಲು ಅನುವು ಮಾಡಿಕೊಡಲಾಗಿದೆ.

ಸಹಕಾರ ಇಲಾಖೆಯ ನಿಯಮಾವಳಿಗಳಂತೆ 486 ನಿವೇಶನಾಕಾಂಕ್ಷಿಗಳ ಜೇಷ್ಠತಾ ಪಟ್ಟಿಯನ್ನು ಸಂಘದಿಂದ ಸಿದ್ದಪಡಿಸಿ, ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು. ಇವರಿಂದ ಕಛೇರಿ ಪತ್ರದ ಸಂಖ್ಯೆ ಹೆಚ್ಎಸ್ಜಿ-1/33/ಹೆಚ್ಹೆಚ್ಎಸ್/2026-27 ದಿನಾಂಕ 15-07-2026ರ ಮೂಲಕ ಅನುಮೋದನೆ ಪಡೆದು ಕೊಂಡಿರುವುದು ನಿಜಕ್ಕೂ ತೃಪ್ತಿದಾಯಕ ವಿಷಯವಾಗಿದೆ. ಉಳಿದ 164 ನಿವೇಶನಾಕಾಂಕ್ಷಿಗಳಿಗೆ ಸಹಕಾರ ಸಂಘದ ಅನುಮೋದನೆ ಪಡೆದು ಮುಂದಿನ ವರ್ಷ (on or before June-2027) ನಿವೇಶನಗಳನ್ನು ಹಂಚಲಾಗುವುದು.

ಇದೀಗ ತಳೂರು-ಮುರುಡಗಳ್ಳಿ-ಕಾಟೂರು ಎಲ್ಲೆಯಲ್ಲಿ ಶ್ರೀ ಜಗದ್ಗುರು ಹೌಸಿಂಗ್ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್ ವತಿಯಿಂದ ಶ್ರೀ ವಾಸ್ತವ ರಾಘವೇಂದ್ರ ಬಡಾವಣೆ ನಿರ್ಮಾಣಗೊಂಡು ವಿವಿಧ ಅಳತೆಯ ಅಂದರೆ 20*30 30*40 30*50 40*60 50*80 ಹಾಗೂ ಅನಿಯತ ಅಳತೆಯ 486 ನಿವೇಶನಗಳು ಅರ್ಹ ಸದಸ್ಯರುಗಳಿಗೆ ಹಂಚಿಕೆ ಮಾಡಲು ಸಮಯ ಸನ್ನಿಹಿತವಾಗಿದೆ. ಇನ್ನು ಉಳಿಕೆ 164 ನಿವೇಶನಗಳನ್ನು ಜೂನ್-2027ರೊಳಗೆ ಅರ್ಹ ಸದಸ್ಯರುಗಳಿಗೆ ಹಂಚಿಕೆ ಮಾಡಲು ಕೂಡ ಸಂಘವು ಕಾರ್ಯ ಪ್ರವೃತ್ತವಾಗಿದೆ ಎಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. ಅಲ್ಲದೆ ಬಡಾವಣೆಗೆ ಸೇರಿದಂತೆ ಮತ್ತಷ್ಟು ಜಮೀನು ಸಹ ಲಭ್ಯವಿದ್ದು ನಿವೇಶನಕ್ಕೆ

ಅರ್ಜಿ ಸಲ್ಲಿಸದೇ ಇರುವ ಸದಸ್ಯರುಗಳಿಗೆ ಮತ್ತೊಂದು ಅವಕಾಶ ಕಲ್ಪಿಸಿ ಪರಿಷ್ಕೃತ ದರದಲ್ಲಿ ಹಣ ಕಟ್ಟಲು ಅವಕಾಶ ಮಾಡಿ ಕೊಡಲಾಗುತ್ತದೆ, ಹಾಗೂ ಅಭಿವೃದ್ಧಿ ಹೊಂದಿದ ನಿವೇಶನಗಳನ್ನು 2027ರ ಡಿಸೆಂಬರ್ ಒಳಗೆ ಹಂಚಿಕೆ ಮಾಡಲು ಕ್ರಮವಹಿಸಲಾಗುತ್ತದೆ.

ದಿನಾಂಕ 22-09-2026 ರಂದು ನಡೆಯುವ ನಿವೇಶನ ಹಂಚಿಕೆ ಕಾರ್ಯಕ್ರಮದಲ್ಲಿ ವಿವಿಧ ಅಳತೆಯ 486 ನಿವೇಶನಗಳನ್ನು ಲಾಟರಿ ಮೂಲಕ ವಿತರಿಸಲಾಗುವುದು. ಈ 486 ನಿವೇಶನಗಳಲ್ಲಿ 50% ನಿವೇಶನಗಳು ಸಂಬಂಧಿಸಿದ ಇಲಾಖೆಯಿಂದ ಬಿಡುಗಡೆಯಾಗಿ ಖಾತೆ ಬಂದಿರುತ್ತವೆ. ಈ ನಿವೇಶನಗಳನ್ನು ಅಕ್ಟೋಬರ್/ನವೆಂಬರ್-2026ರ ಮಾಹೆಯಿಂದ ಸದಸ್ಯರಿಗೆ ನೋಂದಣಿ ಮಾಡಿಕೊಡಲು ಪ್ರಾರಂಭಿಸಲಾಗುವುದು. ಉಳಿದ 50% ನಿವೇಶನಗಳು ಇನ್ನು ಬಿಡುಗಡೆಯಾಗಬೇಕಾಗಿರುತ್ತದೆ. ಆದ್ದರಿಂದ ಈ ನಿವೇಶನಗಳು ಬಿಡುಗಡೆಗೊಂಡು ಖಾತೆ ಬಂದ ತಕ್ಷಣ ನೋಂದಣಿ ಪ್ರಾರಂಭಿಸಲಾಗುವುದು. ಹಾಗೂ ಈ 486 ನಿವೇಶನಗಳಲ್ಲಿ ಮೂಲೆ ನಿವೇಶನಗಳೂ ಮತ್ತು ಅನಿಯತ ಅಳತೆಯ ನಿವೇಶನಗಳು ಸೇರಿರುತ್ತವೆ. ಸದಸ್ಯರುಗಳಿಗೆ ಸಿಹಿ ಸುದ್ದಿಯೇನೆಂದರೆ ನಮ್ಮ ಸಂಘವು ಅನ್ಯ ಹೌಸಿಂಗ್ ಸೊಸೈಟಿಗಳಂತೆ ಮೂಲೆ ಹಾಗೂ ಕಮರ್ಷಿಯಲ್ ನಿವೇಶನಗಳನ್ನು ಹರಾಜು ಮಾಡದೇ(Corner Site)ಲಾಟರಿ ಮುಖಾಂತರವೇ ಹಂಚಲು ನಿರ್ಧರಿಸಲಾಗಿದೆ. ಆಡಳಿತ ಮಂಡಳಿಯ ನಿರ್ಧಾರದಂತೆ ಮೂಲೆ ಹಾಗೂ ಕಮರ್ಷಿಯಲ್ ನಿವೇಶನಗಳಿಗೆ ನಿವೇಶನದ ಮುಖ ಬೆಲೆಯ ಮೇಲೆ ಹೆಚ್ಚುವರಿಯಾಗಿ 10% ಮಾತ್ರ ಸಂಗ್ರಹಿಸಲು ತೀರ್ಮಾನಿಸಲಾಗಿದ್ದು ಕೆಳಕಂಡಂತೆ ಹೆಚ್ಚುವರಿಯಾಗಿ ಹಣ ಪಾವತಿಸಲು ಕೋರುತ್ತೇವೆ.

| **ನಿವೇಶನದ ಅಳತೆ** | **ನಿವೇಶನದ ಒಟ್ಟು ಮೊತ್ತ** | **10% ಹೆಚ್ಚುವರಿ ಮೊತ್ತ** |
|---|---|---|
| 20*30 | 479400/- | 47940/- |
| 30*40 | 958800/- | 95880/- |
| 30*50 | 1198500/- | 119850/- |
| 40*60 | 1917600/- | 191760/- |
| 50*80 | 31,96,000/- | 3,19,600/- |

**(<u>ವಿಶೇಷ ಗಮನಕ್ಕೆ:</u> ಮೂಲೆ ಹಾಗೂ ಕಮರ್ಷಿಯಲ್ ನಿವೇಶನವನ್ನು ಲಾಟರಿ ಮೂಲಕ ಪಡೆದ ಸದಸ್ಯರು 10% ಹೆಚ್ಚುವರಿ ಮೊತ್ತವನ್ನು ಪಾವತಿಸಲು ಸಾಧ್ಯವಾಗದಿದ್ದಲ್ಲಿ ತಮಗೆ ಸಿಕ್ಕ ಮೂಲೆ ಹಾಗೂ ಕಮರ್ಷಿಯಲ್ ನಿವೇಶನವನ್ನು ಹಿಂತಿರುಗಿಸಿ ಮದ್ಯ ನಿವೇಶನವನ್ನು ಪಡೆಯಬಹುದು)**

ಇದಲ್ಲದೆ ಕೆಲವೇಕೆಲವು ಅನಿಯತ ನಿವೇಶನಗಳು 20*30 30*40 30*50 40*60 50*80 ಗಿಂತ ಕಡಿಮೆಯೂ ಇರಬಹುದು ಅಥವಾ ಹೆಚ್ಚೂ ಇರಬಹುದು. ಇಂತಹ ಸಂದರ್ಭಗಳಲ್ಲಿ ತಮಗೆ ಲಭಿಸಿದ ನಿವೇಶನದ ನೈಜ ಅಳತೆಗನುಗುಣವಾಗಿ ಹಣ ಪಾವತಿಸಿ ನಿವೇಶನ ನೋಂದಣಿ ಮಾಡಿಸಿಕೊಳ್ಳಬೇಕಾಗುತ್ತದೆ.

ತಮಗೆ ಈಗಾಗಲೇ ನಿವೇದಿಸಿದಂತೆ ಉಳಿದ 164 ನಿವೇಶನಾಕಾಂಕ್ಷಿಗಳಿಗೆ 2027ರ ಜೂನ್ ರೊಳಗೆ ನಿವೇಶನ ಹಂಚಿಕೆ ಮಾಡಲಾಗುವುದು. (ಅಂದರೆ ಈಗ ವಿತರಿಸುವ 486 ನಿವೇಶನಗಳ ನೋಂದಣಿ ಮುಗಿದ ನಂತರ)

**ನಿಮ್ಮ ನಂಬುಗೆಯ**

**ಸಹಿ/-**
**ಅಧ್ಯಕ್ಷರು**

**ಸಹಿ/-**
**ಕಾರ್ಯದರ್ಶಿ**